# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ರಘುನಾಥ್ ರಾವ್ ಮಲ್ಕಾಪೂರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1106

ಉತ್ತರಿಸಬೇಕಾದ ದಿನಾಂಕ : 29.09.2020

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ರೈತರು ಸಾಲಕ್ಕೆ ಸಹಕಾರ ಸಂಘಗಳಲ್ಲಿ ಸಲ್ಲಿಸಿದ ಅರ್ಜಿಗಳು ಎಷ್ಟು; ನೀಡಿರುವ ಸಾಲ ಎಷ್ಟು; | ಬೀದರ ಜಿಲ್ಲೆಯಲ್ಲಿ ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಬೆಳೆ ಸಾಲಕ್ಕಾಗಿ 2018-19 ರಲ್ಲಿ 1,51,818 ರೈತರು ಮತ್ತು 2019-20 ರಲ್ಲಿ 1,39,703 ರೈತರು ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ಕ್ರಮವಾಗಿ ರೂ.780.73 ಕೋಟಿ ಮತ್ತು ರೂ.724.22 ಕೋಟಿಗಳ ಸಾಲ ವಿತರಿಸಲಾಗಿದೆ.<br>ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಕ್ಕಾಗಿ 2018-19 ರಲ್ಲಿ 828 ರೈತರು ಮತ್ತು 2019-20 ರಲ್ಲಿ 699 ರೈತರು ಅರ್ಜಿ ಸಲ್ಲಿಸಿದ್ದು, ಈ ಪೈಕಿ ಕ್ರಮವಾಗಿ 774 ರೈತರಿಗೆ ರೂ. 11.88 ಕೋಟಿ ಮತ್ತು 679 ರೈತರಿಗೆ ರೂ. 9.98 ಕೋಟಿಗಳ ಸಾಲ ವಿತರಿಸಲಾಗಿದೆ. |
| ಆ) | ಎಲ್ಲಾ ರೈತರಿಗೆ ಸಾಲ ನೀಡದಿರಲು ಕಾರಣಗಳೇನು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಎಲ್ಲಾ ರೈತರಿಗೂ ಸಾಲ ವಿತರಿಸದೇ ಇರುವ ಕಾರಣಗಳನ್ನು ಈ ಕೆಳಗೆ ನೀಡಿದ್ದು, ತಾಲ್ಲೂಕವಾರು ವಿವರವನ್ನು **ಅನುಬಂಧ** ದಲ್ಲಿ ನೀಡಲಾಗಿದೆ.<br>1) ಬೇರೆ ಬ್ಯಾಂಕಿನ ಋಣ ಭಾರವಿರುವುದು<br>2) ಜಂಟಿ ಭೂಮಿಯಿದ್ದು ತಕರಾರು ಅರ್ಜಿ ಸಲ್ಲಿಸಿರುವುದು.<br>3) ಸ್ಕೇಲ್ ಆಫ್ ಫೈನಾನ್ಸನ ಆಧಾರದಂತೆ ಹೊಂದಿರಬೇಕಾದ ಕೃಷಿ ಭೂಮಿ ಇಲ್ಲದಿರುವುದು. |
| ಇ) | ಹಾಗಿದ್ದಲ್ಲಿ, ಈ ವರ್ಷ ಜಿಲ್ಲೆಯ ರೈತರ ಬೇಡಿಕೆಗೆ ತಕ್ಕಂತೆ ಸಾಲ ನೀಡಲಾಗುವುದೇ ? (ಸ್ಪಷ್ಟ ವಿವರ ಒದಗಿಸುವುದು) | 2020-21 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 1,60,000 ರೈತರಿಗೆ ರೂ.857 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ಮತ್ತು 750 ರೈತರಿಗೆ ರೂ.25.00 ಕೋಟಿಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ವಿತರಿಸುವ ಗುರಿಯನ್ನು ಹೊಂದಲಾಗಿದ್ದು, ಮಾರ್ಚ್ 2021 ರೊಳಗೆ ಗುರಿ ತಲುಪಲು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |

**ಸಂಖ್ಯೆ: ಸಿಒ 364 ಸಿಎಲ್ಎಸ್ 2020**

(ಎಸ್.ಟಿ. ಸೋಮಶೇಖರ್)

**ಸಹಕಾರ ಸಚಿವರು**

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ರಘುನಾಥ್ ರಾವ್ ಮಲ್ಕಾಪುರ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1106 ಕ್ಕೆ

## ಅನುಬಂಧ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರು ಕೃಷಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಮತ್ತು ವಿತರಿಸಿದ ಸಾಲದ ವಿವರ(ರೂ.ಲಕ್ಷಗಳಲ್ಲಿ)

| ಕ್ರ.ಸಂ | ತಾಲೂಕಿನ ಹೆಸರು | ಕಾರ್ಯನಿರ್ವಹಿಸುತ್ತಿರುವ ಒಟ್ಟು ಪ್ಯಾಕ್ಸ್‌ಗಳು | ವಾರ್ಷಿಕ ಸಾಲು | | | | | | | | | | | |
|---|---|---|---|---|---|---|---|---|---|---|---|---|---|---|
| | | | 2018-19ನೇ ಸಾಲು | | | | | | 2019-20ನೇ ಸಾಲು | | | | | |
| | | | ಅಲ್ಪಾವಧಿ ಕೃಷಿ ಸಾಲ | | | ಮಧ್ಯಮಾವಧಿ ಕೃಷಿ ಸಾಲ | | | ಅಲ್ಪಾವಧಿ ಕೃಷಿ ಸಾಲ | | | ಮಧ್ಯಮಾವಧಿ ಕೃಷಿ ಸಾಲ | | |
| | | | ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು | ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ | ಸಾಲ ಪಡೆದ ಒಟ್ಟು ಮೊತ್ತ | ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು | ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ | ಸಾಲ ಪಡೆದ ಒಟ್ಟು ಮೊತ್ತ | ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು | ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ | ಸಾಲ ಪಡೆದ ಒಟ್ಟು ಮೊತ್ತ | ರೈತರಿಂದ ಸಾಲಕ್ಕಾಗಿ ಬಂದ ಒಟ್ಟು ಅರ್ಜಿಗಳು | ಸಾಲ ಮಂಜೂರಿ ಪಡೆದ ಒಟ್ಟು ರೈತರ ಸಂಖ್ಯೆ | ಸಾಲ ಪಡೆದ ಒಟ್ಟು ಮೊತ್ತ |
| 1 | ಬೀದರ | 39 | 23835 | 23835 | 13260.87 | 209 | 184 | 264.53 | 21386 | 21386 | 11562.77 | 183 | 177 | 229.59 |
| 2 | ಹುಮನಾಬಾದ | 28 | 26988 | 26988 | 14151.43 | 91 | 84 | 143.75 | 24778 | 24778 | 12879.53 | 72 | 68 | 112.06 |
| 3 | ಬಸವಕಲ್ಯಾಣ | 32 | 29630 | 29630 | 13606.12 | 175 | 173 | 284.37 | 28534 | 28534 | 12811.12 | 140 | 137 | 217.90 |
| 4 | ಭಾಲ್ಕಿ | 36 | 38005 | 38005 | 19675.70 | 174 | 162 | 226.23 | 33329 | 33329 | 18372.20 | 133 | 132 | 203.5 |
| 5 | ಔರಾದ(ಬಿ) | 36 | 33360 | 33360 | 17378.65 | 179 | 171 | 269.53 | 31676 | 31676 | 16796.19 | 171 | 165 | 234.89 |
| ಒಟ್ಟು | | 171 | 151818 | 151818 | 78072.77 | 828 | 774 | 1188.41 | 139703 | 139703 | 72421.81 | 699 | 679 | 997.94 |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)